# ಕಾರವಲ್

ESTD:1976

**19. 11. 2022 ಶನಿವಾರ, ವೃಶ್ಚಿಕ 3**


## ಅಗತ್ಯ ಔಷಧಿಗಳ ನವೀಕೃತ ಪಟ್ಟಿ

384 ಔಷಧಿಗಳು ಒಳಗೊಂಡ ನವೀಕೃತ ರಾಷ್ಟ್ರೀಯ ಅಗತ್ಯ ಔಷಧಿಗಳ ಪಟ್ಟಿಯನ್ನು ಕೇಂದ್ರ ಸರಕಾರ ಬಿಡುಗಡೆಗೊಳಿಸಿರುತ್ತದೆ. ಈ ಹಿಂದೆ ಇದ್ದುದರ ಹೊರತು 34 ಔಷಧಿಗಳನ್ನು ಸೇರಿಸಿದ್ದು, 26 ಔಷಧಿಗಳನ್ನು ಹೊರತುಪಡಿಸಿ ಈ ಪಟ್ಟಿ ಬಿಡುಗಡೆಗೊಳಿಸಲಾಗಿದೆ. ಹೊಸತಾಗಿ ಸೇರ್ಪಡೆಗೊಳಿಸಿದ ಅಗತ್ಯ ಔಷಧಿಗಳ ಪಟ್ಟಿಯಲ್ಲಿ ಪೇಟೆರಟ್ ಇರುವ ಕೆಲವು ಔಷಧಿಗಳನ್ನು ಸೇರ್ಪಡೆಗೊಳಿಸಲಾಗಿದೆ ಎಂಬುದು ಇಲ್ಲಿ ಗಮನಾರ್ಹವಾಗಿದೆ. ಹೈರೈಟಿಸ್– ಸಿಎಚ್ಐವಿಟಿಬಿ ಎಂಬಿವುಗಳಿಗಿರುವ ಐದು ಪೇಟೆಂಟ್ ಔಷಧಿಗಳ ಪಟ್ಟಿಯಲ್ಲಿ ಸ್ಥಾನ ಗಳಿಸಿವೆ.

ಅಗತ್ಯ ಔಷಧಿಗಳ ಪಟ್ಟಿಯಲ್ಲಿರುವ ಔಷಧಿಗಳ ಬೆಲೆ ನಿಯಂತ್ರಿತ ವ್ಯಾಪ್ತಿಯಲ್ಲಿ ಬರುವವುಗಳಾಗಿವೆ. ಆದ್ದರಿಂದ ಹಲವು ಔಷಧಿಗಳಿಗೆ ಬೆಲೆ ಕಡಿಮೆಯಾಗಲು ಸಾಧ್ಯತೆಯಿದೆ. ಇದಾಗಿದೆ ಈದಿನ ನೂತನ ಪಟ್ಟಿ ಬಿಡುಗಡೆಗೊಳಿಸಿರುವುದರ ಪ್ರಧಾನ ಸಾಧನೆ.

ಅರ್ಬುದ, ಮಧುಮೇಹ, ಸಂಧಿವಾತ, ಹೃದ್ರೋಗ, ನಾಡಿ ಸಂಬಂಧಿತ ರೋಗಗಳು ಮೊದಲಾದವುಗಳು ಈ ಹಿಂದೆ ಅಗತ್ಯ ಔಷಧಿಗಳ ಪಟ್ಟಿಯಲ್ಲಿ ಸ್ಥಾನ ಗಳಿಸಿರಲಿಲ್ಲ. ಜೀವನ ಶೈಲಿ ಸಹಿತ ಕಾರಣಗಳಿಂದ ಹೆಚ್ಚಾಗಿ ಉಂಟಾಗುವ ಇಂತಹ ರೋಗಗಳು ಹಲವು ಮಂದಿಯನ್ನು ಬಾಧಿಸುತ್ತವೆ. ಈ ರೀತಿ ರೋಗ ಬಾಧಿತರಲ್ಲಿ ಶ್ರೀಮಂತರು ಮಾತ್ರವಲ್ಲದೆ ಮಧ್ಯಮ ವರ್ಗದವರು ಹಾಗೂ ಜನ ಸಾಮಾನ್ಯರು ಇದ್ದಾರೆ. ಶ್ರೀಮಂತರಾದರೆ ಅಗತ್ಯದ ಚಿಕಿತ್ಸೆ ಪಡೆಯಲು ಅವರಿಗೆ ಹಣದ ಅಭಾವ ವುಂಟಾಗುವುದಿಲ್ಲ. ಆದರೆ ಮಧ್ಯಮ ವರ್ಗದವರು ಸಹಿತ ಕಡು ಬಡವರು ಇದರಿಂದ ಭಾರೀ ಸಮಸ್ಯೆ ಎದುರಿಸಬೇಕಾಗಿ ಬರುತ್ತಿದೆ. ಆದ್ದರಿಂದ ಔಷಧಿಗಳ ಬೆಲೆ ನಿಗದಿಪಡಿಸಲು ವ್ಯವಸ್ಥೆ ಏರ್ಪಡಿಸುತ್ತಿರುವುದು ಅಂತವರಿಗೆ ಭಾರೀ ನೆಮ್ಮದಿ ಮೂಡಿಸುವುದರಲ್ಲಿ ಸಂಶಯವಿಲ್ಲ. ಸುರಕ್ಷಿತ ಫಲಪ್ರದ ಹಾಗೂ ಗುಣಮಟ್ಟದ ಔಷಧಿಗಳನ್ನು ಕಡಿಮೆ ಬೆಲೆಗೆ ಆರೋಗ್ಯ ಸಂಸ್ಥೆಗಳ ಮೂಲಕ ಲಭ್ಯಗೊಳಿಸುವುದೇ ಅಗತ್ಯ ಔಷಧಿಗಳ ಪಟ್ಟಿ ತಯಾರಿಸುವುದರ ಉದ್ದೇಶವಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವರು ತಿಳಿಸುತ್ತಿದ್ದಾರೆ. ಅದನ್ನೇ ಜನರು ಆಗ್ರಹಿಸುತ್ತಿದ್ದಾರೆ.

## ಪೆರುವಾಡ್‌ನಲ್ಲಿ ಕೆಳ ಸೇತುವೆ ನಿರ್ಮಾಣಕ್ಕೆ ಒತ್ತಾಯ: ಚಳವಳಿಗೆ ಬಿಜೆಪಿ ಬೆಂಬಲ

ಕುಂಬಳೆ: ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಅಂಗವಾಗಿ ಪೆರುವಾಡ್‌ನಲ್ಲಿ ಕೆಳ ಸೇತುವೆ ನಿರ್ಮಿಸಬೇಕೆಂದು ಒತ್ತಾಯಿಸಿ ಜನರು ನಡೆಸುತ್ತಿರುವ ಅನಿರ್ಧಿಷ್ಟಾವಧಿ ಚಳವಳಿಗೆ ಬಿಜೆಪಿ ಜಿಲ್ಲಾಧ್ಯಕ್ಷ ರವೀಶ ತಂತ್ರಿ ಕುಂಟಾರು ಬೆಂಬಲ ಸೂಚಿಸಿದ್ದಾರೆ. ಇತ್ತೀಚೆಗೆ ಚಳವಳಿ ಸ್ಥಳಕ್ಕೆಭೇಟಿ ನೀಡಿದ ಅವರು ಮಕ್ಕಳಿಗೆ ಶಾಲೆಗೆ ತೆರಳಲು ಹಾಗೂ ಹಿರಿಯರಿಗೆ ಕೆಲಸಕ್ಕೆ ಹೋಗಲು ಇಲ್ಲಿ ಸಮಸ್ಯೆ ಸೃಷ್ಟಿಯಾಗಲಿದೆ. ಅದಕ್ಕೆ ಪರಿಹಾರ ಕಾಣಬೇಕಾದುದು ಅನಿವಾರ್ಯವಾಗಿದೆ ಎಂದು ತಿಳಿಸಿದರು. ರಾಷ್ಟ್ರೀಯ ಹೆದ್ದಾರಿ ರೀಜಿನಲ್ ಡೈರೆಕ್ಟರ್ ಮೀಣ ಮುಂದಿನ ವಾರ ಸ್ಥಳಕ್ಕೆ ಭೇಟಿ ನೀಡಲಿದ್ದಾರೆಂದೂ, ಈ ವೇಳೆ ಸಮಸ್ಯೆಯನ್ನು ಅವರ ಗಮನಕ್ಕೆ ತಂದು ಪರಿಹಾರ ಕಾಣಬೇಕೆಂದು ಅವರು ಆಗ್ರಹಪಟ್ಟರು. ಕುಂಬಳೆ ಪಂಚಾಯತ್ ಸದಸ್ಯೆ ವಿದ್ಯಾ ಎಸ್. ಪೈ, ಮಾಜಿ ಪಂ. ಸದಸ್ಯ ಸುಧಾಕರ ಕಾಮತ್, ಕ್ರಿಯಾ ಸಮಿತಿ ಪದಾಧಿಕಾರಿಗಳಾದ ಕೆ.ಪಿ. ಇಬ್ರಾಹಿಂ, ಕೃಷ್ಣ ಗಟ್ಟಿ, ನಿಸಾರ್ ಪೆರುವಾಡ್, ಶುಭಕರ, ಅಶ್ರಫ್ ಪೆರುವಾಡ್, ಹಾರಿಸ್, ಇರ್ಷಾದ್ ಮೊದಲಾದವರು ಉಪಸ್ಥಿತರಿದ್ದರು.

## ವೀಡಿಯೊ ಎಡಿಟಿಂಗ್ ಕೋರ್ಸ್ ನ.25 ವರೆಗೆ ಅರ್ಜಿ ಸಲ್ಲಿಸಲು ಅವಕಾಶ

ಕೇರಳ ಮಾಧ್ಯಮ ಅಕಾಡೆಮಿ ಕೊಚ್ಚಿ ಸೆಂಟರ್‌ನಲ್ಲಿ ಮುಂದಿನ ತಿಂಗಳು ಪ್ರಾರಂಭಿಸಲಿರುವ ವೀಡಿಯೊ ಎಡಿಟಿಂಗ್ ಸರ್ಟಿಫಿಕೇಟ್ ಕೋರ್ಸ್‌ಗೆ ನವೆಂಬರ್ 25 ರವರೆಗೆ ಅರ್ಜಿ ಸಲ್ಲಿಸಬಹುದು. ಥಿಯರಿ ಹಾಗು ಪ್ರಾಕ್ಟಿಕಲ್ ಸೇರಿ ಕೋರ್ಸಿನ ಕಾಲಾವಧಿ 6 ತಿಂಗಳು. ನೂತನ ಸಾಫ್ಟ್‌ವೇರ್‌ಗಳಲ್ಲಿ ತರಬೇತಿ ನೀಡಲಾಗುತ್ತದೆ. ಸರಕಾರದ ಅಂಗೀಕಾರ ಇರುವ ಕೋರ್ಸ್ ಗಳಿಗೆ 30,000 ರೂಪಾಯಿ ಶುಲ್ಕ. ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ / ಒ ಇ ಸಿ ವಿದ್ಯಾರ್ಥಿಗಳಿಗೆ ಶುಲ್ಕ ರಿಯಾಯಿತಿ ಇದೆ. ಪ್ಲಸ್ಟು ಶಿಕ್ಷಣ ಯೋಗ್ಯತೆ ಇರುವವರಿಗೆ ಅರ್ಜಿ ಸಲ್ಲಿಸಬಹುದು. ಕೋರ್ಸ್ ನ ಭಾಗವಾಗಿ ಪ್ರಾಯೋಗಿಕ ತರಬೇತಿಯನ್ನು ನೀಡಲಾಗುತ್ತದೆ. ಅರ್ಜಿಗಳನ್ನು ಆನ್ಲೈನ್ ಆಗಿ keralamediaacademy.org ವೆಬ್ಸೈಟ್ ಮೂಲಕ ನೀಡಬಹುದು. ಅರ್ಜಿ ಶುಲ್ಕ 300 ರೂಪಾಯಿ (ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ / ಒ ಇ ಸಿ ವಿಭಾಗಕ್ಕೆ 150 ರೂಪಾಯಿ) ಇ–ಟ್ರಾನ್ಸರ್ / ಬ್ಯಾಂಕ್ ಮುಖೇನ ಕಟ್ಟಿದ ದಾಖಲೆಗಳು, ಪ್ರಮಾಣಪತ್ರಗಳ ಪ್ರತಿಯನ್ನು ಅರ್ಜಿಯೊಂದಿಗೆ ಅಪ್ಲೋಡ್ ಮಾಡಬೇಕು. ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ ನವೆಂಬರ್ 25.

# ಪುರುಷರು ಪೌರುಷವಂತರು



**ಉತ್ತಮವಾದ ವ್ಯಕ್ತಿಯು ತನ್ನ ಬಗ್ಗೆ ಇತರರು ಏನು ಯೋಚಿಸುತ್ತಾರೆ ಎಂಬುವುದರ ಬಗ್ಗೆ ಹೆದರುವುದಿಲ್ಲ. ಆತ ಸರಿಯಾದ ದಾರಿಯಲ್ಲಿಯೇ ಹೆಜ್ಜೆ ಇಡುತ್ತಾನೆ. ತನ್ನ ಕುಟುಂಬ, ಪ್ರೀತಿಪಾತ್ರರಿಗೆ ಯಾವಾಗಲೂ ಒಳ್ಳೆಯದನ್ನೇ ಮಾಡುತ್ತಾನೆ. ವ್ಯಕ್ತಿಗೆ ತನ್ನ ಒಳಗಿನ ಶಕ್ತಿಯನ್ನು ತೋರಿಸಲು ದೈಹಿಕ ಬಲವನ್ನು ಬಳಸಿಕೊಳ್ಳಬೇಕಿಲ್ಲ. ಜೀವನದ ಪ್ರತೀ ಸವಾಲುಗಳನ್ನೂ ಭಯ, ಅಂಜಿಕೆ ಇಲ್ಲದೆ ಎದುರಿಸುವುದೇ ನಿಜವಾದ ಶಕ್ತಿ. ಸಂಬಾವಿತನಾಗಿ ಬದುಕುವುದೇ ನಿಜವಾದ ಜೀವನ. ಇದರಿಂದ ಸಾಮಾಜಿಕವಾಗಿ ಕುಟುಂಬದ ಗೌರವವೂ ಹೆಚ್ಚುತ್ತದೆ. ಪುರುಷನಾದವನು ಮಗ, ಗಂಡ, ಅಜ್ಜ, ಚಿಕ್ಕಪ್ಪ, ದೊಡ್ಡಪ್ಪ, ಮಾವ, ಅಣ್ಣ, ತಮ್ಮ ಅಥವಾ ಇತರ ಸ್ಥಾನಗಳನ್ನು ಪಡೆದುಕೊಂಡು, ಅದನ್ನು ಶಕ್ತವಾಗಿ ನಿಭಾಯಿಸುತ್ತಾನೆ. ಪುರುಷನೆಂದರೆ ಪೌರುಷದ ಮೂರ್ತಿ. ಆತ ಅಂಜುಬುರುಕನಲ್ಲ.**

ನಮ್ಮ ಪರಿಸರದ ಬಹುತೇಕ ಮಂದಿಗೆ ನವಂಬರ್ 19ರಂದು 'ಅಂತರಾಷ್ಟ್ರೀಯ ಪುರುಷರ ದಿನದ ಶುಭಾಶಂಯಗಳು' ಎಂಬ ಸಂದೇಶವನ್ನು ತಂತ್ರಜ್ಞಾನ ಪ್ರೇರಿತ ವ್ಯವಸ್ಥೆಯಲ್ಲಿ ಹರಿಯ ಬಿಟ್ಟಾಗ, 'ಧನ್ಯವಾದಗಳು' ಹೇಳುವವರಿಗಿಂತ, 'ಹೀಗೂ ಒಂದು ದಿನ ಉಂಟೆ...?' ಎಂದು ಪ್ರಶ್ನಿಸುವವರ ಸಂಖ್ಯೆಯೇ ಹೆಚ್ಚು. ಬಹುತೇಕ ಮಂದಿಗೆ ಮಹಿಳಾ ದಿನದ ಹಾಗೆಯೇ ಪುರುಷರಿಗೂ ನಿರ್ಧಾರಿತ ದಿನವಿದೆ ಎಂಬುವುದೇ ತಿಳಿದಿಲ್ಲ. ಜೀವನ ಪೂರ್ತಿ ವಿವಿಧ ಜವಾಬ್ದಾರಿಗಳ ಕಿರೀಟ ತೊಟ್ಟು ಕುಟುಂಬದ ಹಾದಿಯಲ್ಲಿ ನಡೆಯುತ್ತಾ, ಭಯ, ಹೆದರಿಕೆ, ಆತಂಕ, ದುಗುಡಗಳಿದ್ದರೂ ನಗುವಿನ ಪರದೆಯಲ್ಲಿ ಅವುಗಳನ್ನು ಮರೆಮಾಚಿ, ದೈಹಿಕ ಹಾಗೂ ಮಾನಸಿಕ ನೋವುಗಳನ್ನು ನುಂಗಿ, ಮಾನಸಿಕವಾಗಿ ಅತ್ತರೂ ಬಾಹ್ಯ ಪ್ರಪಂಚಕ್ಕೆ ತೋರಿಸದೆ, ಸುಖೀ ಕುಟುಂಬದ ಚುಕ್ಕಾಣಿಯು ವ್ಯಾವಹಾರಿಕ ವಿಭಾಗವನ್ನು ನಿಭಾಯಿಸುವವನೇ ಕುಟುಂಬದ ಗಂಡಸು. ಆತ ಎಲ್ಲಾ ಸವಾಲುಗಳನ್ನೂ ಮೆಟ್ಟಿ ನಿಲ್ಲುವ ವ್ಯಕ್ತಿತ್ವವನ್ನು ಹೊಂದಿರಬೇಕು. ಪುರುಷರ ಬದುಕು ಸುಲಭವಲ್ಲ. ಆತನದ್ದು ಕುಟುಂಬದ ಎಲ್ಲರ ಜೀವನಕ್ಕೆ ಆಧಾರವಾಗುವಷ್ಟು ದೊಡ್ಡ ವ್ಯಕ್ತಿತ್ವ. ಕುಟುಂಬದ ವರ್ಗದಲ್ಲಿ ಆತನ ತ್ಯಾಗ ಜೀವನ ಬಹಳಷ್ಟು ದೊಡ್ಡದಿದೆ. ಪುರುಷನು ಕುಟುಂಬದ ಪ್ರತಿಯೊಬ್ಬರ ಜೀವನದಲ್ಲೂ ಮಹತ್ವ ಪಡೆದಿದ್ದಾನೆ. ಆತನ ಬದುಕಿಗೂ ಗೌರವ ನೀಡುವ ಉದ್ದೇಶದಿಂದ ಈ ಆಚರಣೆ ಆರಂಭವಾಗಿದೆ. ಯುವಕರು, ಹಿರಿಯ ಪುರುಷರು ತಮ್ಮ ಜೀವನದ ಅವಧಿಯಲ್ಲಿ ಅಂತರ್‌ರಾಷ್ಟ್ರೀಯ, ರಾಷ್ಟ್ರ, ಸಮಾಜ, ಕುಟುಂಬದಂತಹಾ ವೈವಿಧ್ಯಮಯ ಕ್ಷೇತ್ರಗಳಿಗೆ ನೀಡಿದ ಸಾಧನೆ ಮತ್ತು ಕೊಡುಗೆಗಳನ್ನು ಈ ದಿನದಂದು ನೆನಪಿಸಲಾಗುತ್ತದೆ. ಕುಟುಂಬದ ನಿರ್ವಹಣೆಯಲ್ಲಿ ಪುರುಷರು ವಹಿಸುವ ಪ್ರಮುಖ ಪಾತ್ರಗಳನ್ನು, ನಿರ್ವಹಿಸುವ ಜವಾಬ್ದಾರಿಗಳನ್ನು ಹಾಗೂ ತೋರಿಸುವ ಅಕ್ಕರೆಯನ್ನು ಈ ದಿನ ನೆನಪಿಸಿಕೊಳ್ಳಲಾಗುತ್ತದೆ. ಅವರ ತ್ಯಾಗಕ್ಕೆ ಗೌರವ ನೀಡಲಾಗುತ್ತದೆ.

1969ರಿಂದಲೇ ಈ ದಿನವನ್ನು ಆಚರಿಸಲು ವಿಶ್ವದಾದ್ಯಂತ ಒತ್ತಾಯ ಇತ್ತು. ಇದಕ್ಕೆ ಪೂರಕವಾಗಿ ಅಂತರ್‌ರಾಷ್ಟ್ರೀಯ ಪುರುಷರ ದಿನವನ್ನು 1992ರ ಫೆಬ್ರವರಿ 7ರಂದು ಥಾಮಸ್ ಓಸ್ಟರ್ ಉದ್ಘಾಟಿಸಿದರು. ಅವರ ಪ್ರಯತ್ನದ ಜತೆಯಲ್ಲೇ ಪುರುಷರ ಕೊಡುಗೆಗಳನ್ನು ಆಚರಿಸುವ ಅನೇಕ ಪ್ರಯತ್ನಗಳು ನಡೆದುವು. ನಂತರ ನವಂಬರ್ 19ರಂದು ಪುರುಷರ ದಿನವನ್ನು ಆಚರಿಸುವ ಬಗ್ಗೆ ಮರು ನಿರ್ಣಯ ಕೈಗೊಳ್ಳಲಾಯಿತು. 1999ರಲ್ಲಿ ಟ್ರಿನಿಡಾಡ್ ಮತ್ತು ಟಪಬಾಗೋದಲ್ಲಿ ವೆಸ್ಟ್‌ಇಂಡೀಸ್ ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕ ಡಾ. ಜೆರೋಮ್ ಟೀಲುಕ್ಸಿಂಗ್ ವಿಶ್ವ ಸಂಸ್ಥೆಯ ಅನುಮೋದನೆಯೊಂದಿಗೆ ನ.19ರಂದು ಈ ದಿನ ಆಚರಿಸಲು ನೇತೃತ್ವ ವಹಿಸಿದ್ದರು. ಬಹುತೇಕ ಸುಮಾರು 70ಕ್ಕೂ ಹೆಚ್ಚಿನ ದೇಶಗಳೂ ಕೂಡಾ ಈ ದಿನವನ್ನು ಪುರುಷರ ದಿನವನ್ನಾಗಿ ಆಚರಿಸಿಕೊಂಡುವು. ಈ ಆಚರಣೆಯಲ್ಲಿ ಪುರುಷರ ಆರೋಗ್ಯದ ಮೇಲೆ ಗಮನ ಕೇಂದ್ರೀಕರಿಸುವುದು ಹಾಗೂ ಅವರಲ್ಲಿ ಆರೋಗ್ಯದ ರಕ್ಷಣೆಯ ಜಾಗೃತಿ ಮೂಡಿಸುವುದು ಕೂಡಾ ಸೇರಿಸಿಕೊಳ್ಳಲಾಯಿತು. ಆರೋಗ್ಯಯುತ ಪುರುಷನಿಂದ ಸುರಕ್ಷಿತ ಹಾಗೂ ಉತ್ತಮ ಸಮಾಜವನ್ನು ನಿರ್ಮಿಸುವುದಕ್ಕೆ ಸಾಧ್ಯ ಎಂದು ಈ ಮೂಲಕ ಜಗತ್ತಿಗೆ ತಿಳಿಸಲಾಯಿತು. ಉತ್ತಮವಾದ ವ್ಯಕ್ತಿಯು ತನ್ನ ಬಗ್ಗೆ ಇತರರು ಏನು ಯೋಚಿಸುತ್ತಾರೆ ಎಂಬುವುದರ ಬಗ್ಗೆ ಹೆದರುವುದಿಲ್ಲ. ಆತ ಸರಿಯಾದ ದಾರಿಯಲ್ಲಿಯೇ ಹೆಜ್ಜೆ ಇಡುತ್ತಾನೆ. ತನ್ನ ಕುಟುಂಬ, ಪ್ರೀತಿಪಾತ್ರರಿಗೆ ಯಾವಾಗಲೂ ಒಳ್ಳೆಯದನ್ನೇ ಮಾಡುತ್ತಾನೆ. ವ್ಯಕ್ತಿಗೆ ತನ್ನ ಒಳಗಿನ ಶಕ್ತಿಯನ್ನು ತೋರಿಸಲು ದೈಹಿಕ ಬಲವನ್ನು ಬಳಸಿಕೊಳ್ಳಬೇಕಿಲ್ಲ. ಜೀವನದ ಪ್ರತೀ ಸವಾಲುಗಳನ್ನೂ ಭಯ, ಅಂಜಿಕೆ ಇಲ್ಲದೆ ಎದುರಿಸುವುದೇ ನಿಜವಾದ ಶಕ್ತಿ. ಸಂಬಾವಿತನಾಗಿ ಬದುಕುವುದೇ ನಿಜವಾದ ಜೀವನ. ಇದರಿಂದ ಸಾಮಾಜಿಕವಾಗಿ ಕುಟುಂಬದ ಗೌರವವೂ ಹೆಚ್ಚುತ್ತದೆ.



• ವಿರಾಜ್ ಅಡೂರು

ಪ್ರತೀ ವರ್ಷವೂ ಮಾರ್ಚ್ 8ರಂದು ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಶ್ವದಾದ್ಯಂತ ಆಚರಿಸುತ್ತಾರೆ. ಪ್ರತೀ ಮಹಿಳೆಯು ಕೂಡಾ ಭಾವೀ ಜನಾಂಗಕ್ಕೆ ವಾತ್ಸಲ್ಯದ ಮೂಲಕ ಜೀವನ ಮೌಲ್ಯಗಳನ್ನು ಕಲಿಸಿದರೆ, ಪುರುಷನು ಜವಾಬ್ದಾರಿಗಳ ಜಾಗೃತಿ ಮೂಡಿಸುವ ಮೂಲಕ ಕುಟುಂಬ ದಲ್ಲಿ ಮಹತ್ವ ಪಡೆಯುತ್ತಾನೆ. ಅದರಲ್ಲೂ ಗಂಡು ಮಕ್ಕಳ ವ್ಯಕ್ತಿತ್ವವನ್ನು ಅರಳಿಸುವಲ್ಲಿ ಮನೆಯ ಗೃಹಸ್ಥನ ಪಾತ್ರ ಮುಂಚೂಣಿ ಯಲ್ಲಿರುತ್ತದೆ. ತನ್ನ ವ್ಯಾವಹಾರಿಕ ಪ್ರಪಂಚಕ್ಕೆ, ಮನೆಯ ಬಾಲಕನನ್ನು ಸಿದ್ಧಗೊಳಿಸಲು, ಆತನನ್ನು ಸಾಮಾಜಿಕವಾಗಿ ವ್ಯವಹಾರ ನಡೆಸಲು ಪ್ರೇರೇಪಿಸುತ್ತಾನೆ. ಸಣ್ಣ ಪುಟ್ಟ ವ್ಯವಹಾರಗಳನ್ನು ಆತನ ಮೂಲಕ ಮಾಡಿಸುತ್ತಾನೆ. ಇದರಿಂದ ಪುರುಷನ ಪ್ರತಿನಿಧಿಯಾಗಿ ಬಾಲಕನು ಕುಟುಂಬ ನಿರ್ವಹಣೆಯ ತರಬೇತಿಯನ್ನು ಪಡೆಯುತ್ತಾನೆ. ಪುರುಷನಾದವನು ಮಗ, ಗಂಡ, ಅಜ್ಜ, ಚಿಕ್ಕಪ್ಪ, ದೊಡ್ಡಪ್ಪ, ಮಾವ, ಅಣ್ಣ, ತಮ್ಮ ಅಥವಾ ಇತರ ಸ್ಥಾನಗಳನ್ನು ಪಡೆದುಕೊಂಡು, ಅದನ್ನು ಶಕ್ತವಾಗಿ ನಿಭಾಯಿಸುತ್ತಾನೆ. ಪುರುಷನೆಂದರೆ ಪೌರುಷದ ಮೂರ್ತಿ. ಆತ ಅಂಜುಬುರುಕನಲ್ಲ. ಪುರುಷನನ್ನು ಕವಿಮಾತಿನಲ್ಲಿ, 'ತನ್ನ ಸ್ವಂತ ಸುಖವನ್ನು ಮರೆತ ಬೈರಾಗಿ/ ತಾನು ತಿನ್ನದೆ ಎಲ್ಲವೂ ತನ್ನವರಿಗಾಗಿ ಎಂದ ವಿರಾಗಿ/ ಜೀವನವನ್ನೇ ಮುಡುಪಾಗಿ ಟ್ಟಿಹನು ತನ್ನ ಪತ್ನಿಮಕ್ಕಳಿಗಾಗಿ' ಎಂದು ಉಲ್ಲೇಖಿಸಲಾಗಿದೆ.

ಕುಟುಂಬ ಪದ್ಧತಿಯಲ್ಲಿ ಗಂಡಸಿಗೆ ವಿಶೇಷ ಸ್ಥಾನವಿದೆ. ಮನೆಯ ಆಂತರಿಕ ವಿಚಾರಗಳನ್ನು ಗೃಹಿಣಿಯು ನೋಡಿಕೊಂಡರೆ, ಮನೆಯ ಬಾಹ್ಯ ವ್ಯವಹಾರಗಳನ್ನು ಗೃಹಸ್ಥರು ನೋಡಿಕೊಳ್ಳುತ್ತಾರೆ. ಒಂದು ಮನೆಯಲ್ಲಿ ಅನೇಕ ಮಂದಿ ಪುರುಷರು ಹಾಗೂ ಸ್ತ್ರೀಯರು

ಇದ್ದಾಗ, ಮನೆಯ ಕೆಲಸಗಳನ್ನು ತಮ್ಮ ಹೊಂದಾಣಿಕೆಯಲ್ಲೇ ಪಾಲು ಮಾಡಿಕೊಳ್ಳುತ್ತಾರೆ. ಹಿಂದಿನ ಕಾಲದಲ್ಲಿ ಸಾರ್ವತ್ರಿಕವಾಗಿ ಇದ್ದಂತಹಾ ಅವಿಭಕ್ತ ಕುಟುಂಬಗಳು ಇಂದು ಕಡಿಮೆಯಾಗಿವೆ.

ಆದ್ದರಿಂದ ಎಲ್ಲೆಡೆ ಸಣ್ಣ ಸಣ್ಣ ಕುಟುಂಬಗಳು ಮಾತ್ರ ಕಂಡು ಬರುತ್ತವೆ. ಪ್ರತೀ ಕುಟುಂಬದಲ್ಲೂ 'ಕುಟುಂಬದ ಯಜಮಾನ' ಎಂಬ ನೆಲೆಯಲ್ಲಿ ಪುರುಷನೇ ಪ್ರಧಾನ ವಾಗುತ್ತಾನೆ. ದೂರಾಲೋಚನೆ, ತ್ಯಾಗ ಮನೋಭಾವ, ವ್ಯಾವಹಾರಿಕ ಜಾಣ್ಮೆ, ಸ್ವಾತಂತ್ರ್ಯ ಮೊದಲಾದ ಕಾರಣಗಳಿಂದ ಆತ ಕುಟುಂಬದ ಯಜಮಾನನಾಗುತ್ತಾನೆ. ಒಬ್ಬ ತಂದೆ, ತನ್ನ ತಂದೆ ಹಾಗೂ ತನ್ನ ಮಗನ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾಗುತ್ತದೆ.

ಅದರ ಜತೆಯಲ್ಲೇ ಮನೆಯ ಇತರ ಸದಸ್ಯರ ಯೋಗ ಕ್ಷೇಮವನ್ನೂ ನೋಡಬೇಕಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನು ಅರಳಿಸುವಲ್ಲಿ ತಂದೆ ಪ್ರಮುಖ ಪಾತ್ರ ವಹಿಸುತ್ತಾನೆ. ಮಗನ ಆಸೆ ಹಾಗೂ ಆಕಾಂಕ್ಷೆಗಳನ್ನು ಪೂರೈಸುವುದೇ ಆತನ ಕರ್ತವ್ಯ. ಅದಕ್ಕಾಗಿ ಆತ ಯಾವುದೇ ತ್ಯಾಗಕ್ಕೂ ಸಿದ್ಧನಿರುತ್ತಾನೆ. ಮನೆಯ ಅಜ್ಜನೂ ಕೂಡಾ ಅವರ ಮಗನನ್ನೇ ಅವಲಂಬಿಸಿರುತ್ತಾನೆ. ತಂದೆಯ ಆರೈಕೆ ಮಗನ ಕರ್ತವ್ಯವೂ ಹೌದು. ಜವಾಬ್ದಾರಿಯೂ ಹೌದು.

# ಪತ್ತೆಯಾಗದ ಅಡಿಕೆ ಕಳ್ಳರು



**ಸೀತಾಂಗೋಳಿಯ ಗತವೈಭವ 12**

ಅಂದಿನ ಕಾಲದಲ್ಲಿ ಸೀತಾಂಗೋಳಿಯ ಅಡಿಕೆ ಬಂಡಸಾಲೆ ಎಂದರೆ ಸುತ್ತೂರಿನಲ್ಲಿ ಎಲ್ಲಾ ತುಂಬ ಪ್ರಸಿದ್ಧಿ ಹೊಂದಿತ್ತು. ಎತ್ತಿನ ಗಾಡಿಯಲ್ಲಿ, ಕಾಲ್ನಡೆಯಲ್ಲಿ ತಲೆಹೊರೆಯಾಗಿ ಅಥವಾ ಆಗ ತಾನೇ ಆರಂಭಿಸಿದ ಮೊರಿಸ್ ಮೈನರ್ ಕಾರಿನಲ್ಲಿ ಮತ್ತು ಹಿಂದೂಸ್ತಾನ್ ಕಂಪೆನಿಯ ಅಂಬಾಸಡರ್ ಕಾರಿನಲ್ಲಿ ಇಲ್ಲಿಗೆ ವಿಕ್ರಯಕ್ಕಾಗಿ ಅಡಿಕೆ ಬರುತ್ತಿತ್ತು. ಆಗ ಎಲ್ಲರಿಗೂ ತಾವು ಬೆಳೆದ ಅಡಿಕೆ ಬೆಳೆಯನ್ನು ಮಂಗಳೂರಿಗೆ ಸಾಗಿಸಿ ವಿಕ್ರಯ ಮಾಡುವುದು ಹೇಗೆ ಎಂದು ತಿಳಿದಿರಲಿಲ್ಲ. ಅಲ್ಲದೆ ಮಂಗಳೂರಿಗೆ ಸಂಚಾರ ಮಾರ್ಗ ಕೇವಲ ದಿನಕ್ಕೊಂದೆರಡು ಬಾರಿ ಕುಂಬಳೆಯಲ್ಲಿ ನಿಲ್ಲುತ್ತಿದ್ದ ರೈಲು ಮಾತ್ರ ಆಗಿತ್ತು.

ಸೀತಾಂಗೋಳಿಯಲ್ಲಿ ಮಹಾಲಿಂಗ ಹೆಬ್ಬಾರರು ಬಂಡಸಾಲೆ ನಿಲ್ಲಿಸಿದಾಗ ಕುಂಬಳೆಯ ಗೌಡ ಸಾರಸ್ವತ ಬ್ರಾಹ್ಮಣರೊಬ್ಬರು ಇದನ್ನು ಬಾಡಿಗೆಗೆ ಪಡೆದು ಅದರಲ್ಲಿ ಎಲ್ಲಾ ತರದ ಕಾಡುತ್ವತ್ತಿ ಹಾಗೂ ವಾಣಿಜ್ಯ ಬೆಳೆಗಳನ್ನು ಖರೀದಿಸಿ ವ್ಯಾಪಾರ ನಡೆಸುತ್ತಿದ್ದರು. ಹೀಗಿರುವಾಗ ಒಂದು ರಾತ್ರಿ ಬಂಡಸಾಲೆಯಿಂದ ಅಡಿಕೆ ಕಳವು ನಡೆಯಿತು. ಸಮೀಪದ ಚೌಕಾರಿನ ಓರ್ವ ಹಿರಿಯರು ಅಲ್ಲಿ ರಾತ್ರಿ ಹೊತ್ತು ಕಾವಲು ಇದ್ದರೂ ಅಡಿಕೆ ಕಳವು ಹೋದ ಬಗ್ಗೆ ಪೊಲೀಸರಿಗೆ ದೂರು ಹೋಯಿತು. ಅಂದಿನ ಚಡ್ಡಿ ಹಾಕಿದ ಪೊಲೀಸರು ಬಂದು ತನಿಖೆ ಕೈಗೊಂಡರು. ಕಾವಲುಗಾರನನ್ನು ಜೀಪಿಗೆ ಹತ್ತಿಸಿ ಅವರ ಕೈವಾಡವಿದೆಯೋ ಎಂದು ಸುಮಾರು ದಿನ ಪ್ರಶ್ನೆ ಮಾಡಿದರು. ಅಲ್ಲದೆ ಆ ಕಾಲದಲ್ಲಿ ಖರ್ಚಿಗಾಗಿ ಚಿಕ್ಕ ಪುಟ್ಟ ತಾಮ್ರದ ಪಾತ್ರೆ ಹಾಗೂ ತೋಟದ ತೆಂಗು, ಅಡಿಕೆ ಕಳವು ಗೈಯ್ಯುವ ಪುಡಿಗಳ್ಳರನ್ನೆಲ್ಲಾ ಜಾಲಾಡಿಸಿ ಹಿಡಿದು ಬಾಯಿ ಬಿಡಿಸಲು ಪ್ರಯತ್ನಿಸಿದರೂ ಕಳವಾದ ಮಾಲು ದೊರಕಲಿಲ್ಲ. ಎಂದೂ ಸೀತಾಂಗೋಳಿ ಪ್ರದೇಶದಲ್ಲಿ ನೀಲಿ ಜೀಪಿನಲ್ಲಿ ಟೊಪ್ಪಿ ಹಾಕಿದ ಪೊಲೀಸರು ಅಡ್ಡಾಡುವುದರಿಂದ ಸೀತಾಂಗೋಳಿ ಪ್ರದೇಶಕ್ಕೆ ಜನ ಸಾಮಾನ್ಯರು ಬರುವುದನ್ನೇ ನಿಲ್ಲಿಸಿದರು. ಅಷ್ಟಾಗುವಾಗ ಬಂಡಸಾಲೆಯ ಮಾಲಿಕರಿಗೆ ಹೊಸ ಉಪಾಯ



• ಥೋಮಸ್ ಡಿ'ಸೋಜ ಸೀತಾಂಗೋಳಿ

ವೊಂದನ್ನು ಯಾರೋ ತಿಳಿಸಿದರು.

ಆ ಹೊಸ ಯೋಜನೆಯ ಪ್ರಕಾರ ದೂರದ ಪಯ್ಯನ್ನೂರಿನಿಂದ ಮಂತ್ರ ವಾದಿಯೊಬ್ಬರನ್ನು ಕರೆಸಿ ಅಂಜನ ಇಟ್ಟು, ಚಿಕ್ಕ ನಿಷ್ಕಳಂಕ ಮಕ್ಕಳ ಮೂಲಕ ಕಳ್ಳರನ್ನು ಕಂಡು ಹಿಡಿಯುವುದು. ಆ ನಂತರ ಅಡಿಕೆ ಬಚ್ಚಿಟ್ಟ ಸ್ಥಳದಿಂದ ಅಡಿಕೆಯನ್ನು ವಶಪಡಿಸಿದ ಬಳಿಕ, ಯಾವುದಾದರೂ ಸತ್ಯದ ಸ್ಥಳದಲ್ಲಿ ತೆಂಗಿನ ಕಾಯಿ ಮಂತ್ರಿಸಿ ಒಡೆದರೆ ಕಳ್ಳರ ತಲೆಯು ತೆಂಗಿನಕಾಯಿಯಂತೆ ಹೋಳಾಗುವುದು ಎಂಬುದಾಗಿತ್ತು ನಂಬಿಕೆ. ಅದರಂತೆ ದೂರದ ಊರಿನಿಂದ ಬಂದ ಮಂತ್ರವಾದಿ ಸಮೀಪದ ಒಂದು ಮನೆಯಲ್ಲಿ ಅಂಜನ ಇಡಲು ಬೇಕಾದ ತಯಾರಿಸಿ ನಡೆಸಿ ಪೂಜೆ ಮಾಡಿ ಎರಡು ಚಿಕ್ಕ ಮಕ್ಕಳ ಮೂಲಕ ಕಳ್ಳರ ಸುಳಿವು ಪಡೆಯಲು ಪ್ರಯತ್ನಿಸಲಾ ಯಿತು. ಅಂಜನ ಇಡುವ ದಿವಸವನ್ನು ಗೌಪ್ಯವಾಗಿಟ್ಟು ಜನ ಸಂದಣಿ ಸೇರುವುದನ್ನು ತಡೆಯಲಾಯಿತು.

ಅಂದಿನ ದಿನ ಇಬ್ಬರು ಚಿಕ್ಕ ಹುಡುಗರನ್ನು ಬೆಳಗ್ಗೆಯೇ ಸ್ನಾನ ಮಾಡಿಸಿ ಪೂಜೆಗೆ ಕುಳ್ಳಿರಿಸಿ, ಎರಡು ವೀಳ್ಯದೆಲೆಗೆ ತೆಂಗಿನ ಎಣ್ಣೆ ಸವರಿ, ಮಕ್ಕಳ ಕಣ್ಣಿಗೆ ಕಾಡಿಗೆ ಹಚ್ಚಿ ನೋಡಿ ವಿವರ ತಿಳಿಸಲು ಕೇಳಲಾಯಿತು. ಹುಡುಗರಿಗೆ ಮಧ್ಯಾಹ್ನದ ತನಕ ನೋಡಿಯೂ ಏನೂ ಗೊತ್ತಾಗಲಿಲ್ಲ. ಆದರೆ ಊಟದ ನಂತರ ನೋಡಿದಾಗ ನಾಲ್ವರು ತಲೆಯ ಮೇಲೆ ಅಡಿಕೆ ಗೋಣಿ ಹೊತ್ತುಕೊಂಡು ತೋಡು ದಾಟಿ ಹೋಗುತ್ತಾರೆ ಎಂದು ತಿಳಿಸಿ ಅಂಜನ ಪ್ರಶ್ನೆ ನಿಲ್ಲಿಸಲಾಯಿತು. ಈ ವಿವರ ಹೇಗೋ ಪೊಲೀಸರಿಗೆ ತಿಳಿದು ಬಂದು, ಅಂಜನ ಇಟ್ಟ ಮಂತ್ರವಾದಿ ಹಾಗೂ ಮಕ್ಕಳನ್ನು ಬೆದರಿಸಿ ಕೇಳಿದಾಗ ಹೀಗೆ ಹೇಳಲು ಊಟದ ವಿರಾಮದಲ್ಲಿ ಮಂತ್ರ ವಾದಿಯೇ ತಿಳಿಸಿದರು ಎಂದು ಸತ್ಯ ಹೇಳಿದರು. ಮಂತ್ರವಾದಿಯನ್ನು ಬೆದರಿಸಿ ಓಡಿಸಲಾಗಿ ಪೊಲೀಸರು ಪುನಃ ತೋಡು ದಾಟಿ ಅಡಿಕೆ ಸಾಗಿದ ಜಾಡು ನೋಡಿ ಊರೆಲ್ಲಾ ಅಟ್ಟಾಡಿಸಿದರು. ಆಗ ಮಾಯಿಪ್ಪಾಡಿ ರಸ್ತೆಯ ತೋಡಿಗೆ ಸಂಕವಿರಲಿಲ್ಲ. ಆದ ಕಾರಣ ಎಲ್ಲರೂ ಕುದ್ರೆಪ್ಪಾಡಿ, ಮಾಯಿಪ್ಪಾಡಿ ಕಡೆಗೆ ಕಳ್ಳರು ಸಾಗಿರಬಹುದು ಎಂದು ನಿಗಮನಕ್ಕೆ ಬಂದರು. ಹೀಗೆ ಈ ಎಲ್ಲ ಕಥೆಯು ಹಳೆಯದಾಗಿ ಅಡಿಕೆ ಕಳವು ಎಲ್ಲರಿಗೂ ಮರೆತು ಹೋಗಿ ಸೀತಾಂಗೋಳಿ ಎಂದಿನಂತೆ ದೈನಂದಿನ ಚಟುವಟಿಕೆಗಳಲ್ಲಿ ಸಾಗಿತು. ಈ ಘಟನೆ ನಡೆದು ಸುಮಾರು 4 ವರ್ಷಗಳ ನಂತರ ಪುತ್ತಿಗೆ, ಬದಿಯಡ್ಕ ರಸ್ತೆಯ ಮಧ್ಯದಲ್ಲಿರುವ

ಒಂದು ಶಿಥಿಲವಾದ ಕಟ್ಟಡ ಮುರಿಯುವಾಗ ಅಂದು ಕಳವಾದ ಅಡಿಕೆ ಗೋಣಿಗಳು ಪತ್ತೆಯಾದುವು.

**ಪುರಾಣ ಕಥಾವಾಹಿನಿ**

# ಮಹಾವಿಷ್ಣು ಕಿಂಕರರಾದ ಜಯ-ವಿಜಯರು



•ವಿಜಯಾಸುಬ್ರಹ್ಮಣ್ಯ, ಕುಂಬಳೆ

ಯಾವುದೇ ಒಂದು ಕೆಲಸಕ್ಕಾಗಿ ಯಜಮಾನರಿಂದ ನೇಮಿಸಲ್ಪಟ್ಟವನು ಕೆಲಸವನ್ನು ಹೇಗೆ ನಿಯೋಜಿಸಿದ್ದಾರೋ ಅದಕ್ಕೆ ತಕ್ಕಂತೆ ನಿರ್ವಹಿಸಿ ಕರ್ತವ್ಯ ಪರಿಪಾಲನೆ ಮಾಡಬೇಕಾದ್ದು ನಿಜ. ಅಲ್ಲದೆ ಕೆಲವು ವೇಳೆ ಆ ಕಾರ್ಯವನ್ನು ಸಮಯ, ಸಂದರ್ಭ,ವೃತ್ತಿಗಳಿಗನುಗುಣವಾಗಿ ವ್ಯವಹರಿಸಬೇಕಾದ್ದು ಅನಿವಾರ್ಯ ಉದಾ: ಪ್ರಸಿದ್ಧ ದೇವಾಲಯವೊಂದರಲ್ಲಿ ಅಪರೂಪವು ವಿಶೇಷವೂ ಆದ ಕಾರ್ಯಕ್ರಮ ನೆರವೇರಿಸಲು ನಿಶ್ಚಯಿಸಿರುತ್ತಾರೆ. ಅದಕ್ಕಾಗಿ ಊಟ, ಉಪಚಾರ, ಧಾರ್ಮಿಕ, ಸಾಂಸ್ಕೃತಿಕ, ಸಕಲ ಕಾರ್ಯಗಳೂ ಸುಸೂತ್ರವಾಗುವಂತೆ ಅದಕ್ಕೆಂದೇ ಕೆಲಸಕ್ಕಾಗಿ ಜನ ನಿಯೋಜಿಸಿರುತ್ತಾರೆ.

ಗಣ್ಯಾತಿಗಣ್ಯರು ಬರುತ್ತಾರೆ. ಜನದಟ್ಟಣೆ ಅಧಿಕವಾದಾಗ ದೇವಾಲಯದ ಒಳಗಿನ ದ್ವಾರದಲ್ಲಿ ಸಾರ್ವಜನಿಕರ ನೂಕುನುಗ್ಗಲು ತಡೆಯಲು ಒಂದೇ ಸಮನೆ ಪ್ರವೇಶಿಸುವವರನ್ನು ದ್ವಾರಪಾಲಕ ತಡೆಯುತ್ತಾನೆ. ಹಾಗೆಂದು ಕಾರ್ಯಕ್ರಮಕ್ಕೆ ವಿಶೇಷವಾಗಿ ಆಮಂತ್ರಿಸಲ್ಪಟ್ಟು ಗಣ್ಯರನ್ನು ತಡೆಯುವ ಹಾಗಿಲ್ಲವಲ್ಲ..? ಒಂದು ವೇಳೆ ತಡೆದರೆ ಅವರಿಗೆ ತೇಜೋಭಂಗ ಮಾಡಿದಂತಾಗುತ್ತದೆ. ಹಾಗೆ ಮಾಡಬಾರದು. ಕರ್ತವ್ಯದತ್ತ ವಿವೇಕವೂ ಬೇಕು ಎಂಬುದೇ ಜಯ–ವಿಜಯರ ಕಡೆಯಿಂದ ನಾವು ಕಲಿಯುವ ಪಾಠ. ಒಂದು ವೇಳೆ ಅನುಚಿತವಾಗಿ ನಡದಲ್ಲಿ ಅದಕ್ಕೆ ಕ್ಷಮೆ ಕೇಳಬೇಕಾಗುತ್ತದೆ

ಅಥವಾ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು, ಆದು ಭೀಕರವೂ ಭಯಂಕರವೂ ಆದರೂ ಅನಿವಾರ್ಯ ಎಂಬುದು ಜಯ–ವಿಜಯರ ಕತೆ ತಿಳಿಸುತ್ತದೆ.

ಮಹರ್ಷಿ ಕರ್ದಮ ಹಾಗೂ ಪ್ರಜಾಪತಿ ಪಾರಂಗತರಾಗಿ ಜಿತೇಂದ್ರಿಯರಾಗಿದ್ದರು. ಇವರು ಮಹಾವಿಷ್ಣುವಿನ ಪರಮಭಕ್ತರಾಗಿದ್ದರು, ಇವರ ಭಕ್ತಿ ಪಾರಮ್ಯ ಎಷ್ಟಿತ್ತೆಂದರೆ....ಈ ಸಹೋದರರು ನಿತ್ಯವೂ ವಿಷ್ಣುವಿನ ಪೂಜೆ ಮಾಡುತ್ತಿದ್ದು ಅವರ ಪೂಜೆಯನ್ನು ಪ್ರತ್ಯಕ್ಷರೂಪದಿಂದ ಕಾಣಿಸಿಕೊಂಡು ಮಹಾವಿಷ್ಣು ಸ್ವೀಕರಿಸುತ್ತಿದ್ದನಂತೆ.

ಒಮ್ಮೆ ಮರುತನೆಂಬ ರಾಜನು ಬಲುದೊಡ್ಡ ಯಾಗವೊಂದನ್ನು ಕೈಗೊಂಡು ಅದರ ನಿರ್ವಹಣೆಯನ್ನು ಜಯ–ವಿಜಯರಿಗೇ ಒಪ್ಪಿದನು. ತೇಜಸ್ವಿಗಳೂ ಪರಿಣತರೂ ಆಗಿದ್ದ ಋಷಿಕುಮಾರರು ಯಜ್ಞವನ್ನು ಸಾಂಗವಾಗಿ ನೆರವೇರಿಸಿಕೊಟ್ಟು ರಾಜನ ಪ್ರೀತಿಗೆ ಪಾತ್ರರಾದರು. ಮಹಾರಾಜನು ಆ ಸಹೋದರರಿಗೆ ವಿಪುಲವಾಗಿ ದಕ್ಷಿಣೆಯನ್ನು ನೀಡಿ ಸತ್ಕರಿಸಿದನು, ಮನೆಗೆ ಹಿಂತಿರುಗಿದ ಅಣ್ಣ– ತಮ್ಮಂದಿರು ತಮಗೆ ಸಿಕ್ಕಿದ ದ್ರವ್ಯಗಳನ್ನು ಹಂಚಿಕೊಳ್ಳುವಾಗ ನನಗೆ ಹೆಚ್ಚು, ತನಗೆ ಹೆಚ್ಚು ಎಂದು ಕಾದಾಡಿದರು. ಕಚ್ಚಾಡುತ್ತಾ ಅವರೀರ್ವರೂ ಪರಸ್ಪರ ಶಾಪಕೊಟ್ಟುಕೊಂಡರು. ಅಣ್ಣನಾದ 'ಜಯ' ತಮ್ಮನಿಗೆ,

ನೀನು ಮೊಸಳೆಯಾಗಿ ಹೋಗು ಎಂದು ಕೋಪದ ಭರದಲ್ಲಿ ನುಡಿದರೆ ತಮ್ಮನಾದ ವಿಜಯನು ಜಯನಿಗೆ 'ನೀನು ಆನೆಯಾಗು' ಎಂದು ಶಾಪವಿತ್ತನು. ಮೊಸಳೆ–ಆನೆಯಾದ ಮೇಲೆ ಅವರೀರ್ವರಿಗೂ ಪಶ್ಚಾತ್ತಾಪವಾಯಿತು. ಸಿಟ್ಟಿನ ಕೈಗೆ ಬುದ್ಧಿಯನ್ನುಕೊಡಬಾರದು' ಎಂದು ಹೇಳುವುದು ಇದಕ್ಕೆ. ದುಡುಕಿದ ಇಬ್ಬರೂ ಮಹಾವಿಷ್ಣುವನ್ನು ಪೂಜಿಸಿದ ಪರಿಣಾಮವಾಗಿ ಮಹಾವಿಷ್ಣು ಪ್ರತ್ಯಕ್ಷನಾಗಿ ನಿಮ್ಮ ಶಾಪದ ಫಲ ನೀವು ಅನುಭವಿಸಬೇಕು. ಆ ಕರ್ಮಫಲ ಕಳೆದಾಗ ನಾನು ಅನುಗ್ರಹಿಸುತ್ತೇನೆ' ಎಂದನು.

ಗಂಡಕೀ ನದಿಯ ಪಕ್ಕದ ವನವೊಂದರಲ್ಲಿ ಜಯ ಆನೆಯಾಗಿ ತಿರುಗುತ್ತಿದ್ದರೇ. ಅದೇ ನದಿಯಲ್ಲಿ ವಿಜಯನು ಮೊಸಳೆಯಾದನು. ಅಲ್ಲಿಯೂ ಅವರು ಜಗಳವಾಡುತ್ತಿದ್ದರು. ಒಮ್ಮೆ ಆ ನದಿಗೆ ನೀರು ಕುಡಿಯಲು ಆನೆರೂಪದ ಜಯನು ಬಂದಾಗ ಮೊಸಳೆರೂಪದ ವಿಜಯನು ಆನೆಯ ಕಾಲನ್ನು ಕಚ್ಚಿ ಹಿಡಿದೆಳೆಯಿತು. ಆನೆ ಎಷ್ಟು ಒದ್ದಾಡಿದರೂ ಮೊಸಳೆ ಬಿಡಲಿಲ್ಲ. ಆಗ ಆನೆ ಮಹಾವಿಷ್ಣುವನ್ನು ಅನನ್ಯವಾಗಿ ಸ್ಮರಿಸಿತು. ಆನೆಯ ಮೊರೆ ಕೇಳಿ ಮಹಾವಿಷ್ಣು ಪ್ರತ್ಯಕ್ಷನಾಗಿ ತನ್ನ ಚಕ್ರದಿಂದ ಮೊಸಳೆಯನ್ನು ಸೀಳಿ ಹಾಕಿದನು. ಇಲ್ಲಿ ಇಬ್ಬರಿಗೂ ನಿಜರೂಪ ಬಂದು ಮುಂದೆ ಅವರಿಬ್ಬರನ್ನು ಮಹಾವಿಷ್ಣುವು ವೈಕುಂಠದ ದ್ವಾರಪಾಲಕರನ್ನಾಗಿ ನೇಮಿಸಿದನು.

ಹೀಗಿರುತ್ತಾ ಒಂದು ದಿನ 'ಸನಕ', ಸನಂದ ಮೊದಲಾದ ಮುನಿಗಳು ಶ್ರೀಮನ್ನಾರಾಯಣನ ಸಂದರ್ಶನಕ್ಕಾಗಿ ವೈಕುಂಠಕ್ಕೆ ಬಂದರು. ಜಯ–ವಿಜಯರು ದೇವ–ದೇವನ ಸಾನ್ನಿಧ್ಯಕ್ಕೆ ಬಂದವರನ್ನು ಮಹಾಮುನಿಗಳೆಂದು ಅರಿಯದೆ ತಡೆದರು. ಇದರಿಂದ ಮುನಿಗಳು ಸಿಟ್ಟಾಗದೆ ಇರುತ್ತಾರೆಯೇ? ಅವರು ಜಯ–ವಿಜಯರಿಗೆ ರಾಕ್ಷಸರಾಗುವಂತೆ ಶಾಪವಿತ್ತು ತಾವು ದೇವದರ್ಶನಗೈದು ಹೊರಟು ಬಿಟ್ಟರು.



ಅದರಿಂದ ಖತಿಗೊಂಡ ಜಯ–ವಿಜಯರು ಮುನಿಗಳ ಹಿಂದೆಯೇ ಹೋಗಿ ಶಾಪ ಹಿಂತೆಗೆಯುವಂತೆ ವಿನಂತಿಸಿಕೊಂಡರು. ಒಮ್ಮೆ ಕೊಟ್ಟ ಶಾಪವನ್ನು ಹಿಂತೆಗೆಯುವ ಹಾಗಿಲ್ಲ. ಆದರೆ ಅದರ ತೀವ್ರತೆಯನ್ನು ಕಡಿಮೆ ಮಾಡಬಹುದು' ಎಂದರು ಋಷಿಗಳು.

**ಅದು ಹೇಗೆ ?**

ಮಹಾವಿಷ್ಣುವಿನ ಮಿತ್ರರಾಗಿ ಜನ್ಮವೆತ್ತಿದರೆ ಹತ್ತು ಜನ್ಮದಲ್ಲೂ ಶತ್ರುಗಳಾಗಿ ಹುಟ್ಟಿದರೆ ಮೂರು ಜನ್ಮದಲ್ಲೂ ನಿಮ್ಮ ಶಾಪವಿಮೋಚನೆಯಾಗಬಹುದು. ಇದರಲ್ಲಿ ಯಾವುದನ್ನು ಆಯ್ಕೆ ಮಾಡಿತ್ತೀರೋ ಅದು ನಿಮಗೆ ಬಿಟ್ಟಿದ್ದು' ಎಂದರು ಋಷಿವರ್ಯರು. ಆಗ ಜಯ–ವಿಜಯರು 'ಮಹಾವಿಷ್ಣುವಿನ ಶತ್ರುಗಳಾದರೂ ಚಿಂತೆಯಿಲ್ಲ. ಆದಷ್ಟು ಬೇಗ ನಮ್ಮ ಶಾಪ ವಿಮೋಚನೆಯಾಗಿ ಮೊದಲಿನಂತೆ ವಿಷ್ಣುವಿನ ಕಿಂಕರಾಗಬೇಕೆಂಬುದೇ ನಮ್ಮಿಚ್ಛೆ' ಎಂದಾಗ ಮುನಿಗಳು ತಥಾಸ್ತು ಎಂದರು. ಮೊದಲಿನ ಜನ್ಮದಲ್ಲಿ ಹಿರಣ್ಯಾಕ್ಷ ಮತ್ತು ಹಿರಣ್ಯಕಶಿಪುಗಳಾಗಿ ಹುಟ್ಟಿ ವರಾಹಸ್ವಾಮಿ ಹಾಗೂ ನರಸಿಂಹ ಸ್ವಾಮಿಯಿಂದ

ಹತರಾದರು. ಎರಡನೇ ಜನ್ಮದಲ್ಲಿ ರಾವಣ–ಕುಂಭಕರ್ಣರಾಗಿ ಜನ್ಮವೆತ್ತಿ ಶ್ರೀರಾಮನಿಂದ ವಧಿಸಲ್ಪಟ್ಟರು. ಮೂರನೆ ಜನ್ಮದಲ್ಲಿ ಶಿಶುಪಾಲ–ದಂತವಕ್ರರಾಗಿ ಹುಟ್ಟಿ ಶ್ರೀ ಕೃಷ್ಣನಿಂದ ಕೊಲ್ಲಲ್ಪಟ್ಟು ಶಾಪವಿಮೋಚನೆ ಹೊಂದಿ ವೈಕುಂಠವನ್ನು ಸೇರಿದರು.

ಶತ್ರುವೋ ಮಿತ್ರನೋ ಹೇಗಾದರೂ ತಮ್ಮ ಸ್ವಾಮಿಯನ್ನು ಶೀಘ್ರ ಸೇರಬೇಕೆಂಬುದೇ ಜಯ–ವಿಜಯರ ತವಕ . ತಮ್ಮ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಂಡ ಅವರುಗಳ ಹಿರಿಮೆ ಹಿರಿದಾದುದು. ಇದರಿಂದಾಗಿ ನಮಗೆ ನರಸಿಂಹಾವತಾರ, ರಾಮಾಯಣ, ಶ್ರೀಕೃಷ್ಣಾವತಾರ ಮೊದಲಾದ ಪುರಾಣಗಳು ಲಭಿಸುವಂತಾಯಿತು. ದೇವ–ದೇವನ ಆಪ್ತರಾದರೂ ತಪ್ಪೆಸಗಿದಲ್ಲಿ ಅದಕ್ಕೆ ತಕ್ಕ ಶಿಕ್ಷೆ ಅನುಭವಿಸಿಯೇ ತೀರಬೇಕು. ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಉಂಟಾಗುವ ಲೋಪ–ದೋಷಕ್ಕೆ ತಕ್ಕುದಾದ ದಂಡನೆಯನ್ನು ಸ್ವೀಕರಿಸಿ ತಿದ್ದಿಕೊಳ್ಳುವವನೇ ನಿಜವಾದ ಮಹಾನುಭಾವ ಎಂಬ ತಿರುಳನ್ನು ನಾವಿಲ್ಲಿ ತಿಳಿಯಬಹುದು.